# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 1365
**ಸದಸ್ಯರ ಹೆಸರು** : ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ)
**ಉತ್ತರಿಸುವವರು** : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು.
**ಉತ್ತರಿಸಬೇಕಾದ ದಿನಾಂಕ** : 22.08.2025

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಅಪೌಷ್ಠಿಕತೆಯಿಂದ ಬಳಲುತ್ತಿರುವ ಮಹಿಳೆಯರು ಮತ್ತು ಮಕ್ಕಳ ಪೌಷ್ಠಿಕತೆ ವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮಗಳೇನು; (ಮಹಿಳೆಯರಿಗೆ ಮತ್ತು ಮಕ್ಕಳಿಗೆ ರೂಪಿಸಿರುವ ಯೋಜನೆಗಳ ಪ್ರತ್ಯೇಕ ಮಾಹಿತಿ ನೀಡುವುದು) | ಮಹಿಳೆಯರ ಮತ್ತು ಮಕ್ಕಳ ಅಪೌಷ್ಠಿಕತೆ ನಿವಾರಣೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಕೈಗೊಂಡ ಕ್ರಮಗಳ ವಿವರವನ್ನು ಅನುಬಂಧ-1 ರಲ್ಲಿ ಒದಗಿಸಿದೆ. |
| ಆ) | ಕಳೆದ 2 ವರ್ಷಗಳಲ್ಲಿ ಅಪೌಷ್ಠಿಕತೆಯಲ್ಲಿ ಬದಲಾವಣೆಯನ್ನು ಕಂಡಿರುವ ಜಿಲ್ಲೆಗಳು ಯಾವುವು; ಮತ್ತು ರಾಜ್ಯದ ಜಿಲ್ಲೆಗಳ ಅಪೌಷ್ಠಿಕತೆಯ ಸೂಚ್ಯಂಕದ ವಿವರಗಳೇನು: (ಪಟ್ಟಿ ನೀಡುವುದು) | NFHS-5 ಸರ್ವೆ ಸೂಚಕಗಳ(Indicator) ಪ್ರಕಾರ ರಾಜ್ಯದ ಸಾಧಾರಣ ಅಪೌಷ್ಟಿಕ ಮಕ್ಕಳ ಸರಾಸರಿ ಶೇ.11.1 ಹಾಗೂ ತೀವ್ರ ಅಪೌಷ್ಟಿಕ ಮಕ್ಕಳ ಸರಾಸರಿ ಶೇ.8.4 ಇರುತ್ತದೆ. ಆದರೆ ರಾಜ್ಯದಲ್ಲಿ ಪೋಷಣ್ ಟ್ರಾಕರ್‌ನಲ್ಲಿ 2023-24 ನೇ ಸಾಲಿನಲ್ಲಿ ಸಾಧಾರಣ ಅಪೌಷ್ಟಿಕ ಮಕ್ಕಳು ಶೇ.5.27 ಹಾಗೂ ತೀವ್ರ ಅಪೌಷ್ಟಿಕ ಮಕ್ಕಳು ಶೇ.2.64 ರಷ್ಟು ಗುರುತಿಸಲಾಗಿರುತ್ತದೆ. 2024-25ನೇ ಸಾಲಿನಲ್ಲಿ ಮಾರ್ಚ್ ಅಂತ್ಯಕ್ಕೆ ಸಾಧಾರಣ ಅಪೌಷ್ಟಿಕ ಮಕ್ಕಳು ಶೇ.3.15 ಹಾಗೂ ತೀವ್ರ ಅಪೌಷ್ಟಿಕ ಮಕ್ಕಳು ಶೇ.0.33 ರಷ್ಟು ಗುರುತಿಸಲಾಗಿರುತ್ತದೆ. ರಾಜ್ಯದಲ್ಲಿ NFHS-5 ಸರ್ವೆ ಸೂಚಕಗಳಿಗಿಂತ ಸಾಧಾರಣ ಅಪೌಷ್ಟಿಕ ಮಕ್ಕಳು ಹಾಗೂ ತೀವ್ರ ಅಪೌಷ್ಟಿಕ ಮಕ್ಕಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿರುವುದು ಕಂಡುಬಂದಿರುತ್ತದೆ.<br><br>ರಾಜ್ಯದ ಅಪೌಷ್ಟಿಕತೆಯ ಸುಧಾರಣೆಯ ಸೂಚ್ಯಂಕದ ವಿವರ ಪಟ್ಟಿ ಅನುಬಂಧ-2 ರಲ್ಲಿ ಒದಗಿಸಿದೆ. |
| ಇ) | ಕಲ್ಯಾಣ ಕರ್ನಾಟಕದ ಜಿಲ್ಲೆಗಳು ರಾಜ್ಯದಲ್ಲಿಯೇ ಅತೀ ಹೆಚ್ಚು ಅಪೌಷ್ಟಿಕತೆ ಹೊಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬೆಳವಣಿಗೆಗೆ ಕಾರಣಗಳೇನು; | NFHS-5 ಸರ್ವೆ ಸೂಚಕಗಳ(Indicator) ಪ್ರಕಾರ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳ ಸಾಧಾರಣ ಅಪೌಷ್ಟಿಕ ಮಕ್ಕಳ ಸರಾಸರಿ ಶೇ.11.96 ಹಾಗೂ ತೀವ್ರ ಅಪೌಷ್ಟಿಕ ಮಕ್ಕಳ ಸರಾಸರಿ ಶೇ.10.46 ಇರುತ್ತದೆ. ಆದರೆ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಪೋಷಣ್ ಟ್ರಾಕರ್ ಅನ್ವಯ 2023-24ನೇ ಸಾಲಿನಲ್ಲಿ ಸಾಧಾರಣ ಅಪೌಷ್ಟಿಕ ಮಕ್ಕಳು ಶೇ.7.05 ಹಾಗೂ ತೀವ್ರ ಅಪೌಷ್ಟಿಕ ಮಕ್ಕಳು ಶೇ.4.12 ರಷ್ಟು ಗುರುತಿಸಲಾಗಿರುತ್ತದೆ. 2024-25ನೇ ಸಾಲಿನಲ್ಲಿ ಮಾರ್ಚ್ ಅಂತ್ಯಕ್ಕೆ ಸಾಧಾರಣ ಅಪೌಷ್ಟಿಕ ಮಕ್ಕಳು ಶೇ.5.37 ಹಾಗೂ ತೀವ್ರ ಅಪೌಷ್ಟಿಕ ಮಕ್ಕಳು ಶೇ.0.72 ರಷ್ಟು ಗುರುತಿಸಲಾಗಿರುತ್ತದೆ. ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ NFHS-5 ಸರ್ವೆ ಸೂಚಕಗಳಿಗಿಂತ ಸಾಧಾರಣ ಅಪೌಷ್ಟಿಕ ಮಕ್ಕಳು ಹಾಗೂ ತೀವ್ರ ಅಪೌಷ್ಟಿಕ ಮಕ್ಕಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿರುವುದು ಕಂಡುಬಂದಿರುತ್ತದೆ.<br><br>ಕಲ್ಯಾಣ ಕರ್ನಾಟಕದ ಭಾಗದ ಜಿಲ್ಲೆಗಳಲ್ಲಿ ಅಪೌಷ್ಠಿಕತೆ ಮಟ್ಟದ ವಿವರವನ್ನು ಅನುಬಂಧ-3 ರಲ್ಲಿ ಒದಗಿಸಿದೆ. |

......2

| | | |
|---|---|---|
| ಈ) | ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳ ಎಷ್ಟು ಮಕ್ಕಳು ಸಾಧಾರಣ ಮತ್ತು ತೀವ್ರ ಅಪೌಷ್ಠಿಕತೆಯಿಂದ ಬಳಲುತ್ತಿವೆ; (ಜಿಲ್ಲಾವಾರು ಅಂಕಿ-ಅಂಶಗಳ ಮಾಹಿತಿ ನೀಡುವುದು) | ಕಲ್ಯಾಣ ಕರ್ನಾಟಕ ಭಾಗದ 07 ಜಿಲ್ಲೆಗಳಲ್ಲಿ ಜುಲೈ-2025ರ ಅಂತ್ಯಕ್ಕೆ ಪೋಷಣ್ ಟ್ರ್ಯಾಕರ್ ತಂತ್ರಾಂಶದಲ್ಲಿ ಗುರುತಿಸಲಾದ ತೀವ್ರ ಅಪೌಷ್ಠಿಕ ಮಕ್ಕಳ ಸಂಖ್ಯೆ:3111(0.38%) ಮತ್ತು ಸಾಧಾರಣ ಅಪೌಷ್ಠಿಕ ಮಕ್ಕಳ ಸಂಖ್ಯೆ:40876 (4.97%) ಇರುತ್ತದೆ. ಜಿಲ್ಲಾವಾರು ಅಂಕಿ-ಅಂಶಗಳ ಮಾಹಿತಿಯನ್ನು ಅನುಬಂಧ-4ರಲ್ಲಿ ಒದಗಿಸಿದೆ. |
| ಉ) | ಕಳೆದ 3 ವರ್ಷಗಳಲ್ಲಿ ಅಪೌಷ್ಠಿಕತೆಯನ್ನು ಹೋಗಲಾಡಿಸಲು ರಾಜ್ಯದ ವಿವಿಧ ಜಿಲ್ಲೆಗಳಿಗೆ ಹಂಚಿಕೆಯಾದ ಅನುದಾನ ಎಷ್ಟು; ಅಪೌಷ್ಠಿಕತೆ ಹೋಗಲಾಡಿಸಲು ಮಹಿಳೆಯರಿಗೆ ಮತ್ತು ಮಕ್ಕಳಿಗೆ ನೀಡುತ್ತಿರುವ ಆಹಾರಗಳು ಯಾವುವು; (ಮಾಹಿತಿ ನೀಡುವುದು) | ಕಳೆದ 03 ವರ್ಷಗಳಲ್ಲಿ ಅಪೌಷ್ಠಿಕತೆಯನ್ನು ಹೋಗಲಾಡಿಸಲು ರಾಜ್ಯದ ವಿವಿಧ ಜಿಲ್ಲೆಗಳಿಗೆ ಹಂಚಿಕೆ ಮಾಡಲಾದ ಅನುದಾನದ ವಿವರ ಅನುಬಂಧ-05ರಲ್ಲಿ ಒದಗಿಸಿದೆ.<br><br>ಮಹಿಳೆಯರಿಗೆ ಮತ್ತು ಮಕ್ಕಳಿಗೆ ಅಂಗನವಾಡಿ ಕೇಂದ್ರಗಳಲ್ಲಿ ವಿತರಿಸಲಾಗುತ್ತಿರುವ ಪೂರಕ ಪೌಷ್ಠಿಕ ಆಹಾರದ ವಿವರ ಅನುಬಂಧ-6 ರಲ್ಲಿ ಒದಗಿಸಿದೆ. |
| ಊ) | "ಅಪೌಷ್ಠಿಕ ಮಕ್ಕಳ ದತ್ತು ಯೋಜನೆ" ಜಾರಿಗೆ ಬಂದದ್ದು ಯಾವಾಗ; ಇಲ್ಲಿಯವರೆಗೆ ಎಷ್ಟು ಮಕ್ಕಳನ್ನು ಈ ಯೋಜನೆಯಡಿಯಲ್ಲಿ ದತ್ತು ಪಡೆಯಲಾಗಿದೆ; (ದತ್ತು ಪಡೆದವರ ಮತ್ತು ಮಕ್ಕಳ ಜಿಲ್ಲಾವಾರು ಮಾಹಿತಿ ನೀಡುವುದು) ಮತ್ತು ಈ ದತ್ತು ಪಡೆದ ಮಕ್ಕಳ ಈಗಿನ ಪೌಷ್ಠಿಕತೆ ಹೇಗಿದೆ? (ವಿವರ ನೀಡುವುದು) | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ಅಪೌಷ್ಠಿಕ ಮಕ್ಕಳ ದತ್ತು ಯೋಜನೆ ಪ್ರಸ್ತುತ ಜಾರಿಯಲ್ಲಿರುವುದಿಲ್ಲ. |

**ಸಂಖ್ಯೆ: ಮಮಇ 234 ಐಸಿಡಿ 2025**

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಸಚಿವರು

## ಅನುಬಂಧ-1

**ಅಂಗನವಾಡಿ ಕೇಂದ್ರಗಳಲ್ಲಿ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಒದಗಿಸಲಾಗುತ್ತಿರುವ ಪೂರಕ ಪೌಷ್ಠಿಕ ಆಹಾರದ ವಿವರ :**

**(ಎ) ಮಾತೃಪೂರ್ಣ ಯೋಜನೆ** : ಮಾತೃಪೂರ್ಣ ಯೋಜನೆಯನ್ನು 2017 ಅಕ್ಟೋಬರ್ 2ನೇ ತಾರೀಖಿನಿಂದ ರಾಜ್ಯಾದ್ಯಂತ ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆಯಡಿ ಗರ್ಭಿಣಿ ಮತ್ತು ಬಾಣಂತಿಯರಿಗೆ ಪೌಷ್ಠಿಕಾಂಶಯುಕ್ತ ಮಧ್ಯಾಹ್ನದ ಬಿಸಿಯೂಟವನ್ನು ಅಂಗನವಾಡಿ ಕೇಂದ್ರದಲ್ಲಿಯೇ ನೀಡಲಾಗುತ್ತದೆ.

ಕೇಂದ್ರ ಸರ್ಕಾರದ ರೂ.4.75 ರ ಅನುದಾನದೊಂದಿಗೆ ರೂ.16.25 ರ ರಾಜ್ಯ ಸರ್ಕಾರದ ಹೆಚ್ಚುವರಿ ಅನುದಾನ ಸೇರಿ ಒಟ್ಟು ರೂ. 21.00 ರ ಘಟಕ ವೆಚ್ಚದಲ್ಲಿ ಗರ್ಭಿಣಿ, ಬಾಣಂತಿಯರಲ್ಲಿ ಅಪೌಷ್ಠಿಕತೆ ಮತ್ತು ರಕ್ತಹೀನತೆ ತಡೆಯಲು ಅನುವಾಗುವಂತೆ ಬಿಸಿಯೂಟವನ್ನು ಸಿದ್ಧಪಡಿಸಿ ಅಂಗನವಾಡಿ ಕೇಂದ್ರದಲ್ಲಿಯೇ ವಿತರಣೆ ಮಾಡಲಾಗುತ್ತಿದೆ.

ಮುಂದುವರೆದು, ಪ್ರಸಕ್ತ ಸಾಲಿನಲ್ಲಿ ಫಲಾನುಭವಿಗಳ ಇಚ್ಛೆಗನುಸಾರವಾಗಿ ಅಗತ್ಯವಿರುವ ಕಚ್ಚಾ ಆಹಾರ ಸಾಮಗ್ರಿಗಳನ್ನು ಮನೆಗೆ (THR) ವಿತರಿಸಲಾಗುತ್ತಿದೆ ಹಾಗೂ ಅಂಗನವಾಡಿ ಕೇಂದ್ರದಲ್ಲಿಯೇ ಪೌಷ್ಠಿಕಯುಕ್ತ ಬಿಸಿಯೂಟವನ್ನು ಸ್ವೀಕರಿಸಬಹುದಾಗಿದೆ.

**(ಬಿ) ಮಕ್ಕಳಿಗೆ ಪೂರಕ ಪೌಷ್ಠಿಕ ಆಹಾರ :** ಅಂಗನವಾಡಿ ಕೇಂದ್ರಗಳಲ್ಲಿ ದಾಖಲಾದ 6 ತಿಂಗಳಿಂದ 6 ವರ್ಷದ ಮಕ್ಕಳಿಗೆ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ 300 ದಿನಗಳ ಪೂರಕ ಪೌಷ್ಠಿಕ ಆಹಾರವನ್ನು ನೀಡಲಾಗುತ್ತಿದೆ.

- ಎಲ್ಲಾ ಮಕ್ಕಳಿಗೆ ಅಂಗನವಾಡಿ ಕೇಂದ್ರದಲ್ಲಿ ಪ್ರತಿದಿನ ರೂ.**8.00** ಮೌಲ್ಯದ **ಪೂರಕ ಪೌಷ್ಠಿಕ ಆಹಾರ**ವನ್ನು ನೀಡಲಾಗುತ್ತಿದೆ.
- **ತೀವ್ರ ಅಪೌಷ್ಠಿಕ** ಮಕ್ಕಳಿಗೆ ಪ್ರತಿ ದಿನ ರೂ.12.00 ಮೌಲ್ಯದ ಪೂರಕ ಪೌಷ್ಠಿಕ ಆಹಾರವನ್ನು ನೀಡಲಾಗುತ್ತಿದೆ.
- ಅಂಗನವಾಡಿಗೆ ಹಾಜರಾಗುವ **3 ವರ್ಷದಿಂದ 6** ವರ್ಷದ ಎಲ್ಲಾ ಮಕ್ಕಳಿಗೆ ವಾರದಲ್ಲಿ **2 ದಿನ ಮೊಟ್ಟೆಯನ್ನು** ನೀಡಲಾಗುತ್ತಿದೆ.
- ರಾಜ್ಯ ಸರ್ಕಾರದ ಕ್ಷೀರಭಾಗ್ಯ ಯೋಜನೆಯಡಿ **6** ತಿಂಗಳಿಂದ 6 ವರ್ಷದ ಎಲ್ಲಾ ಅಂಗನವಾಡಿ ಮಕ್ಕಳಿಗೆ ವಾರದಲ್ಲಿ 5 ದಿನ 150 ಮಿ.ಲಿ ಹಾಲನ್ನು (15ಗ್ರಾಂ ಕೆನೆಭರಿತ ಹಾಲಿನಪುಡಿ, 5 ಗ್ರಾಂ ಸಕ್ಕರೆ) ನೀಡಲಾಗುತ್ತಿದೆ.
- 6 ತಿಂಗಳಿಂದ 3 ವರ್ಷದ ತೀವ್ರ / ಸಾಧಾರಣ ಅಪೌಷ್ಠಿಕ ಮಕ್ಕಳಿಗೆ ವಾರದಲ್ಲಿ 3 ದಿನ ಮೊಟ್ಟೆ ಹಾಗೂ 3 ದಿನ 20 ಗ್ರಾಂ. ಹಾಲಿನ ಪುಡಿಯನ್ನು ಮನೆಗೆ ವಿತರಿಸಲಾಗುತ್ತಿದೆ.
- 3 ವರ್ಷದಿಂದ 6 ವರ್ಷದ ತೀವ್ರ / ಸಾಧಾರಣ ಅಪೌಷ್ಠಿಕ ಮಕ್ಕಳಿಗೆ ವಾರದಲ್ಲಿ 5 ದಿನ ಮೊಟ್ಟೆ ಹಾಗೂ 3 ದಿನ 20 ಗ್ರಾಂ. ಹಾಲಿನ ಪುಡಿಯನ್ನು ಮನೆಗೆ ವಿತರಿಸಲಾಗುತ್ತಿದೆ.

- ಆರೋಗ್ಯ ಮತ್ತು ಪೌಷ್ಠಿಕ ಶಿಬಿರಗಳನ್ನು ಏರ್ಪಡಿಸಿ ಅಧಿಕ ಪೌಷ್ಠಿಕತೆಯುಳ್ಳ ಆಹಾರಗಳನ್ನು ತಯಾರಿಸುವ ಕುರಿತು ಮತ್ತು ಮಕ್ಕಳಿಗೆ ಪೌಷ್ಠಿಕತೆಯುಳ್ಳ ಆಹಾರವನ್ನು ನೀಡಲು ಅರಿವು ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ ಹಾಗೂ ಪೋಷಣ್ ಮಾಸಾಚರಣೆ ಕಾರ್ಯಕ್ರಮದಲ್ಲಿಯೂ ಸಹ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ವಿಶೇಷ ಪೌಷ್ಠಿಕ ಶಿಬಿರಗಳನ್ನು ಆಯೋಜಿಸಲಾಗುತ್ತಿರುತ್ತದೆ.

**2. ಚುಚ್ಚುಮದ್ದು ಕಾರ್ಯಕ್ರಮ: /**

6 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಮತ್ತು ಗರ್ಭಿಣಿಯರಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ನಿಗದಿತ ಚುಚ್ಚುಮದ್ದನ್ನು ನೀಡಲಾಗುತ್ತಿದೆ.

**3. ಆರೋಗ್ಯ ತಪಾಸಣೆ:**

ಅಂಗನವಾಡಿ ಕೇಂದ್ರದಲ್ಲಿ ದಾಖಲಾಗಿರುವ ಎಲ್ಲಾ ಮಕ್ಕಳ ಆರೋಗ್ಯ ತಪಾಸಣೆಯನ್ನು ನಿಯಮಿತವಾಗಿ 3 ತಿಂಗಳಿಗೊಮ್ಮೆ (RBSK ಮತ್ತು ವೈದ್ಯಕೀಯ ಅಧಿಕಾರಿಗಳಿಂದ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ನಡೆಸಲಾಗುತ್ತಿದೆ.

**4.ಮಾಹಿತಿ ಸೇವೆ:**

ಅಂಗನವಾಡಿ ಕೇಂದ್ರಗಳಿಗೆ ವೈದ್ಯಾಧಿಕಾರಿಗಳು ಭೇಟಿ ನೀಡಿ ಮಕ್ಕಳ ಆರೋಗ್ಯ ತಪಾಸಣೆ ಮಾಡಿದಾಗ ಹೆಚ್ಚಿನ ತಪಾಸಣೆಗೆ ಅಥವಾ ಚಿಕಿತ್ಸೆಗೆ ತಾಲ್ಲೂಕು ಆರೋಗ್ಯ ಕೇಂದ್ರ / ಜಿಲ್ಲಾ ಆರೋಗ್ಯ ಕೇಂದ್ರಕ್ಕೆ / ಪೌಷ್ಠಿಕ ಪುನರ್ವಸತಿ ಕೇಂದ್ರಗಳಿಗೆ ಕಳುಹಿಸಲು ಸೂಚಿಸುತ್ತಾರೆ. ವೈದ್ಯರು ಸೂಚಿಸಿದಂತೆ ಅಂಗನವಾಡಿ ಕಾರ್ಯಕರ್ತೆಯರು ಹೆಚ್ಚಿನ ಚಿಕಿತ್ಸೆ, ತಪಾಸಣೆಗೆ ಮಕ್ಕಳನ್ನು ಕಳುಹಿಸಿಕೊಡುತ್ತಾರೆ.

## ಅನುಬಂಧ-2

### ರಾಜ್ಯದ ಅಪೌಷ್ಟಿಕತೆಯ ಸುಧಾರಣೆಯ ಸೂಚ್ಯಂಕದ ವಿವರ ಪಟ್ಟಿ

| | | Mar-24 | | Mar-25 | | Mar-24 | | Mar-25 | | Mar-24 | | Mar-25 | | Reduction of malnutrition Children | | | |
|---|---|---|---|---|---|---|---|---|---|---|---|---|---|---|---|---|---|
| Sl. No | District | Total Active Children Registered in the AWC for the Month | Total Active Children measured (Height & Weight) for the Month | Total Active Children Registered in the AWC for the Month | Total Active Children measured (Height & Weight) for the Month | SAM (N) | SAM (%) | SAM (N) | SAM (%) | MAM (N) | MAM (%) | MAM (N) | MAM (%) | SAM (N) | SAM (%) | MAM (N) | MAM (%) |
| 1 | 2 | 3 | 4 | 6 | 7 | 9 | 10 | 11 | 12 | 13 | 14 | 15 | 16 | 17 | 18 | 19 | 20 |
| 1 | Bagalkot | 140442 | 137081 | 134192 | 132611 | 3038 | 2.22 | 240 | 0.18 | 6301 | 4.6 | 2993 | 2.26 | 2798 | 2.04 | 3308 | 2.34 |
| 2 | Bangalore Rural | 44053 | 43098 | 46372 | 46060 | 576 | 1.34 | 44 | 0.1 | 1440 | 3.34 | 584 | 1.27 | 532 | 1.24 | 856 | 2.07 |
| 3 | Belagavi | 319503 | 304751 | 354784 | 354471 | 8582 | 2.82 | 488 | 0.14 | 17862 | 5.86 | 11428 | 3.22 | 8094 | 2.68 | 6434 | 2.64 |
| 4 | Bellary | 85948 | 81739 | 103503 | 102505 | 2059 | 2.52 | 652 | 0.64 | 4774 | 5.84 | 4496 | 4.39 | 1407 | 1.88 | 278 | 1.45 |
| 5 | Bengaluru Urban | 162577 | 160367 | 168486 | 167882 | 2396 | 1.49 | 59 | 0.04 | 7337 | 4.58 | 2584 | 1.54 | 2337 | 1.45 | 4753 | 3.04 |
| 6 | Bidar | 115555 | 111688 | 115342 | 113640 | 6650 | 5.95 | 838 | 0.74 | 8985 | 8.04 | 6369 | 5.6 | 5812 | 5.21 | 2616 | 2.44 |
| 7 | Chamarajanagar | 42516 | 42069 | 40715 | 40195 | 1678 | 3.99 | 198 | 0.49 | 2791 | 6.63 | 1871 | 4.65 | 1480 | 3.5 | 920 | 1.98 |
| 8 | Chikballapur | 66996 | 65540 | 63841 | 63599 | 1703 | 2.6 | 114 | 0.18 | 3551 | 5.42 | 2741 | 4.31 | 1589 | 2.42 | 810 | 1.11 |
| 9 | Chikkamagaluru | 45654 | 45454 | 46773 | 46686 | 1226 | 2.7 | 45 | 0.1 | 2607 | 5.74 | 524 | 1.12 | 1181 | 2.6 | 2083 | 4.62 |
| 10 | Chitradurga | 92104 | 89203 | 98571 | 98160 | 3435 | 3.85 | 260 | 0.26 | 6642 | 7.45 | 4482 | 4.57 | 3175 | 3.59 | 2160 | 2.88 |
| 11 | Dakshina Kannada | 87813 | 85385 | 97269 | 97004 | 867 | 1.02 | 38 | 0.04 | 3022 | 3.54 | 331 | 0.34 | 829 | 0.98 | 2691 | 3.2 |
| 12 | Davanagere | 86704 | 83860 | 90225 | 89929 | 2561 | 3.05 | 139 | 0.15 | 5340 | 6.37 | 3189 | 3.55 | 2422 | 2.9 | 2151 | 2.82 |
| 13 | Dharwad | 99349 | 96611 | 102896 | 101251 | 1927 | 1.99 | 221 | 0.22 | 4095 | 4.24 | 2085 | 2.06 | 1706 | 1.77 | 2010 | 2.18 |
| 14 | Gadag | 66423 | 65467 | 70389 | 69877 | 1290 | 1.97 | 263 | 0.38 | 2761 | 4.22 | 1199 | 1.72 | 1027 | 1.59 | 1562 | 2.5 |
| 15 | Hassan | 59400 | 56984 | 64650 | 64554 | 1196 | 2.1 | 355 | 0.55 | 2515 | 4.41 | 2238 | 3.47 | 841 | 1.55 | 277 | 0.94 |
| 16 | Haveri | 100959 | 100716 | 108789 | 108655 | 442 | 0.44 | 122 | 0.11 | 1558 | 1.55 | 423 | 0.39 | 320 | 0.33 | 1135 | 1.16 |
| 17 | Kalaburagi | 171100 | 160858 | 207687 | 205194 | 7276 | 4.52 | 707 | 0.34 | 10304 | 6.41 | 11401 | 5.56 | 6569 | 4.18 | -1097 | 0.85 |
| 18 | Kodagu | 19453 | 18937 | 21169 | 21075 | 330 | 1.74 | 103 | 0.49 | 789 | 4.17 | 569 | 2.7 | 227 | 1.25 | 220 | 1.47 |
| 19 | Kolar | 78810 | 76036 | 88621 | 87942 | 1349 | 1.77 | 162 | 0.18 | 3849 | 5.06 | 2238 | 2.54 | 1187 | 1.59 | 1611 | 2.52 |
| 20 | Koppal | 117674 | 115682 | 119184 | 117947 | 4467 | 3.86 | 515 | 0.44 | 6906 | 5.97 | 4009 | 3.4 | 3952 | 3.42 | 2897 | 2.57 |
| 21 | Mandya | 70489 | 70089 | 76557 | 76313 | 2554 | 3.64 | 298 | 0.39 | 4177 | 5.96 | 1276 | 1.67 | 2256 | 3.25 | 2901 | 4.29 |
| 22 | Mysuru | 104100 | 102922 | 125170 | 124123 | 692 | 0.67 | 275 | 0.22 | 2306 | 2.24 | 2166 | 1.75 | 417 | 0.45 | 140 | 0.49 |
| 23 | Raichur | 140183 | 131951 | 162854 | 159980 | 4979 | 3.77 | 2066 | 1.29 | 11760 | 8.91 | 11995 | 7.5 | 2913 | 2.48 | -235 | 1.41 |
| 24 | Ramanagara | 46264 | 45595 | 47478 | 46840 | 1367 | 3 | 137 | 0.29 | 2470 | 5.42 | 632 | 1.35 | 1230 | 2.71 | 1838 | 4.07 |
| 25 | Shivamogga | 82440 | 80447 | 86846 | 86667 | 1623 | 2.02 | 96 | 0.11 | 4202 | 5.22 | 1502 | 1.73 | 1527 | 1.91 | 2700 | 3.49 |
| 26 | Tumakuru | 129011 | 127660 | 124509 | 123944 | 899 | 0.7 | 235 | 0.19 | 3195 | 2.5 | 1949 | 1.57 | 664 | 0.51 | 1246 | 0.93 |
| 27 | Udupi | 42660 | 41337 | 42294 | 42112 | 468 | 1.13 | 59 | 0.14 | 1239 | 3 | 349 | 0.83 | 409 | 0.99 | 890 | 2.17 |
| 28 | Uttara Kannada | 68021 | 65626 | 66666 | 66370 | 311 | 0.47 | 60 | 0.09 | 1287 | 1.96 | 630 | 0.95 | 251 | 0.38 | 657 | 1.01 |
| 29 | Vijayanagara | 94017 | 86627 | 99104 | 97947 | 2737 | 3.16 | 1184 | 1.21 | 6194 | 7.15 | 5413 | 5.53 | 1553 | 1.95 | 781 | 1.62 |
| 30 | Vijayapura | 155401 | 147141 | 184038 | 180392 | 4664 | 3.17 | 288 | 0.16 | 8165 | 5.55 | 5615 | 3.11 | 4376 | 3.01 | 2550 | 2.44 |
| 31 | Yadgir | 100310 | 96342 | 105233 | 103931 | 4140 | 4.3 | 530 | 0.51 | 6430 | 6.67 | 4722 | 4.54 | 3610 | 3.79 | 1708 | 2.13 |
| Total | | 3035929 | 2937263 | 3264207 | 3237856 | 77482 | 2.64 | 10791 | 0.33 | 154854 | 5.27 | 102003 | 3.15 | 66691 | 2.31 | 52851 | 2.12 |

ಅನುಬಂಧ-3

ಕಲ್ಯಾಣ ಕರ್ನಾಟಕ ಭಾಗದ ತೀವ್ರ ಅಪೌಷ್ಟಿಕ ಮಕ್ಕಳ ಮತ್ತು ಸಾಧಾರಣ ಅಪೌಷ್ಟಿಕ ಮಕ್ಕಳ ಜಿಲ್ಲಾವಾರು ಪಟ್ಟಿ

| | | Mar-24 | | Mar-25 | | Mar-24 | | Mar-25 | | Mar-24 | | Mar-25 | | Reduction of malnutrition children | | | | NFHS-05 | |
|---|---|---|---|---|---|---|---|---|---|---|---|---|---|---|---|---|---|---|---|
| Sl. No | District | Total Active Children Registered in the AWC for the Month | Total Active Children measured (Height & Weight) for the Month | Total Active Children Registered in the AWC for the Month | Total Active Children measured (Height & Weight) for the Month | SAM (N) | SAM (%) | SAM (N) | SAM (%) | MAM (N) | MAM (%) | MAM (N) | MAM (%) | SAM (N) | SAM (%) | MAM (N) | MAM (%) | SAM (%) | MAM( %) |
| 1 | Bellary | 85948 | 81739 | 103503 | 102505 | 2059 | 2.52 | 652 | 0.64 | 4774 | 5.84 | 4496 | 4.39 | **1407** | **1.88** | **278** | **1.45** | 13.60 | 9.30 |
| 2 | Bidar | 115555 | 111688 | 115342 | 113640 | 6650 | 5.95 | 838 | 0.74 | 8985 | 8.04 | 6369 | 5.6 | **5812** | **5.21** | **2616** | **2.44** | 11.10 | 11.00 |
| 3 | Kalaburagi | 171100 | 160858 | 207687 | 205194 | 7276 | 4.52 | 707 | 0.34 | 10304 | 6.41 | 11401 | 5.56 | **6569** | **4.18** | **-1097** | **0.85** | 12.20 | 12.80 |
| 4 | Koppal | 117674 | 115682 | 119184 | 117947 | 4467 | 3.86 | 515 | 0.44 | 6906 | 5.97 | 4009 | 3.4 | **3952** | **3.42** | **2897** | **2.57** | 3.80 | 19.30 |
| 5 | Raichur | 140183 | 131951 | 162854 | 159980 | 4979 | 3.77 | 2066 | 1.29 | 11760 | 8.91 | 11995 | 7.5 | **2913** | **2.48** | **-235** | **1.41** | 11.70 | 11.50 |
| 6 | Vijayanagara | 94017 | 86627 | 99104 | 97947 | 2737 | 3.16 | 1184 | 1.21 | 6194 | 7.15 | 5413 | 5.53 | **1553** | **1.95** | **781** | **1.62** | 13.60 | 9.30 |
| 7 | Yadgir | 100310 | 96342 | 105233 | 103931 | 4140 | 4.3 | 530 | 0.51 | 6430 | 6.67 | 4722 | 4.54 | **3610** | **3.79** | **1708** | **2.13** | 7.20 | 10.50 |
| **Total** | | **824787** | **784887** | **912907** | **901144** | **32308** | **4.12** | **6492** | **0.72** | **55353** | **7.05** | **48405** | **5.37** | **25816** | **3.40** | **6948** | **1.68** | **10.46** | **11.96** |

## ಅನುಬಂಧ-4

### ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಜುಲೈ-2025ರ ಅಂತ್ಯಕ್ಕೆ ಗುರುತಿಸಲಾದ ತೀವ್ರ ಅಪೌಷ್ಟಿಕ ಮಕ್ಕಳ ಮತ್ತು ಸಾಧಾರಣ ಅಪೌಷ್ಟಿಕ ಮಕ್ಕಳ ವಿವರ ಪಟ್ಟಿ

| Sl. No | District | Total Active Children Registered in the AWC for the Month | Total Active Children measured (Height & Weight) for the Month | Measurement efficiency (%) | SAM (N) | SAM (%) | MAM (N) | MAM (%) |
|---|---|---|---|---|---|---|---|---|
| 1 | Bellary | 93203 | 91725 | 98.41 | 303 | 0.33 | 2852 | 3.11 |
| 2 | Bidar | 110017 | 108887 | 98.97 | 108 | 0.1 | 5724 | 5.26 |
| 3 | Kalaburagi | 190073 | 185629 | 97.66 | 508 | 0.27 | 8771 | 4.73 |
| 4 | Koppal | 108842 | 108353 | 99.55 | 438 | 0.4 | 3964 | 3.66 |
| 5 | Raichur | 147411 | 146025 | 99.06 | 451 | 0.31 | 10174 | 6.97 |
| 6 | Vijayanagara | 92478 | 90029 | 97.35 | 724 | 0.8 | 4775 | 5.3 |
| 7 | Yadgir | 96222 | 91467 | 95.06 | 579 | 0.63 | 4616 | 5.05 |
| **Total** | | **838246** | **822115** | **98.08** | **3111** | **0.38** | **40876** | **4.97** |

ಅನುಬಂಧ-5

ಕಳೆದ 03 ವರ್ಷಗಳಲ್ಲಿ ಅಪೌಷ್ಟಿಕ ಮಕ್ಕಳ ಸುಧಾರಣೆಗೆ ಬಿಡುಗಡೆ ಮಾಡಲಾದ ಅನುದಾನದ ವಿವರ

(ರೂ. ಲಕ್ಷಗಳಲ್ಲಿ)

| ಕ್ರ. ಸಂ | ಜಿಲೆಗಳು | 2022-23 | | 2023-24 | | 2024-25 | |
|---|---|---|---|---|---|---|---|
| | | ತೀವ್ರ ಅಪೌಷ್ಟಿಕ ಮಕ್ಕಳು | ಬಿಡುಗಡೆ ಮಾಡಲಾದ ಅನುದಾನ | ತೀವ್ರ ಅಪೌಷ್ಟಿಕ ಮಕ್ಕಳು | ಬಿಡುಗಡೆ ಮಾಡಲಾದ ಅನುದಾನ | ತೀವ್ರ ಅಪೌಷ್ಟಿಕ ಮಕ್ಕಳು | ಬಿಡುಗಡೆ ಮಾಡಲಾದ ಅನುದಾನ |
| 1 | ಬಾಗಲಕೋಟೆ | 2741 | 98.68 | 3038 | 109.37 | 240 | 8.64 |
| 2 | ಬೆಂಗಳೂರು ಗ್ರಾ | 619 | 22.28 | 576 | 20.74 | 44 | 1.584 |
| 3 | ಬೆಳಗಾವಿ | 9039 | 325.40 | 8582 | 308.95 | 488 | 17.568 |
| 4 | ಬಳ್ಳಾರಿ | 3807 | 137.05 | 2059 | 74.12 | 652 | 23.472 |
| 5 | ಬೆಂಗಳೂರು ನಗರ | 591 | 21.28 | 2396 | 86.26 | 59 | 2.124 |
| 6 | ಬೀದರ್ | 4327 | 155.77 | 6650 | 239.40 | 838 | 30.168 |
| 7 | ಚಾಮರಾಜನಗರ | 1309 | 47.12 | 1678 | 60.41 | 198 | 7.128 |
| 8 | ಚಿಕ್ಕಬಳ್ಳಾಪುರ | 1846 | 66.46 | 1703 | 61.31 | 114 | 4.104 |
| 9 | ಚಿಕ್ಕಮಗಳೂರು | 1134 | 40.82 | 1226 | 44.14 | 45 | 1.62 |
| 10 | ಚಿತ್ರದುರ್ಗ | 2510 | 90.36 | 3435 | 123.66 | 260 | 9.36 |
| 11 | ದಕ್ಷಿಣ ಕನ್ನಡ | 1547 | 55.69 | 867 | 31.21 | 38 | 1.368 |
| 12 | ದಾವಣಗೆರೆ | 2290 | 82.44 | 2561 | 92.20 | 139 | 5.004 |
| 13 | ಧಾರವಾಡ | 1532 | 55.15 | 1927 | 69.37 | 221 | 7.956 |
| 14 | ಗದಗ | 1450 | 52.20 | 1290 | 46.44 | 263 | 9.468 |
| 15 | ಹಾಸನ | 1180 | 42.48 | 1196 | 43.06 | 355 | 12.78 |
| 16 | ಹಾವೇರಿ | 657 | 23.65 | 442 | 15.91 | 122 | 4.392 |
| 17 | ಕಲಬುರ್ಗಿ | 6402 | 230.47 | 7276 | 261.94 | 707 | 25.452 |
| 18 | ಕೊಡಗು | 79 | 2.84 | 330 | 11.88 | 103 | 3.708 |
| 19 | ಕೋಲಾರ | 3333 | 119.99 | 1349 | 48.56 | 162 | 5.832 |
| 20 | ಕೊಪ್ಪಳ | 3138 | 112.97 | 4467 | 160.81 | 515 | 18.54 |
| 21 | ಮಂಡ್ಯ | 1964 | 70.70 | 2554 | 91.94 | 298 | 10.728 |
| 22 | ಮೈಸೂರು | 2074 | 74.66 | 692 | 24.91 | 275 | 9.9 |
| 23 | ರಾಯಚೂರು | 5065 | 182.34 | 4979 | 179.24 | 2066 | 74.376 |
| 24 | ರಾಮನಗರ | 964 | 34.70 | 1367 | 49.21 | 137 | 4.932 |
| 25 | ಶಿವಮೊಗ್ಗ | 1527 | 54.97 | 1623 | 58.43 | 96 | 3.456 |
| 26 | ತುಮಕೂರು | 2327 | 83.77 | 899 | 32.36 | 235 | 8.46 |
| 27 | ಉಡುಪಿ | 309 | 11.12 | 468 | 16.85 | 59 | 2.124 |
| 28 | ಉತ್ತರ ಕನ್ನಡ | 1049 | 37.76 | 311 | 11.20 | 60 | 2.16 |
| 29 | ವಿಜಯನಗರ | 0 | 0.00 | 2737 | 98.53 | 1184 | 42.624 |
| 30 | ವಿಜಯಪುರ | 4768 | 171.65 | 4664 | 167.90 | 288 | 10.368 |
| 31 | ಯಾದಗಿರಿ | 3722 | 133.99 | 4140 | 149.04 | 530 | 19.08 |
| ಒಟ್ಟು | | **73300** | **2638.80** | **77482** | **2789.35** | **10791** | **388.476** |

## ಅನುಬಂಧ-6

**ಮಹಿಳೆಯರಿಗೆ ಮತ್ತು ಮಕ್ಕಳಿಗೆ ಅಂಗನವಾಡಿ ಕೇಂದ್ರಗಳಲ್ಲಿ ಅಪೌಷ್ಠಿಕತೆ ನಿವಾರಣೆಗೆ ವಿತರಿಸಲಾಗುತ್ತಿರುವ ಪೂರಕ ಪೌಷ್ಠಿಕ ಆಹಾರದ ವಿವರ :**

**1. ಪೂರಕ ಪೌಷ್ಠಿಕ ಆಹಾರ :**

**(ಎ) ಮಾತೃಪೂರ್ಣ ಯೋಜನೆ :** ಮಾತೃಪೂರ್ಣ ಯೋಜನೆಯನ್ನು 2017 ಅಕ್ಟೋಬರ್ 2ನೇ ತಾರೀಖಿನಿಂದ ರಾಜ್ಯಾದ್ಯಂತ ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆಯಡಿ ಗರ್ಭಿಣಿ ಮತ್ತು ಬಾಣಂತಿಯರಿಗೆ ಪೌಷ್ಠಿಕಾಂಶಯುಕ್ತ ಮಧ್ಯಾಹ್ನದ ಬಿಸಿಯೂಟವನ್ನು ಅಂಗನವಾಡಿ ಕೇಂದ್ರದಲ್ಲಿಯೇ ನೀಡಲಾಗುತ್ತದೆ.

ಕೇಂದ್ರ ಸರ್ಕಾರದ ರೂ.4.75 ರ ಅನುದಾನದೊಂದಿಗೆ ರೂ.16.25 ರ ರಾಜ್ಯ ಸರ್ಕಾರದ ಹೆಚ್ಚುವರಿ ಅನುದಾನ ಸೇರಿ ಒಟ್ಟು ರೂ. 21.00 ರ ಘಟಕ ವೆಚ್ಚದಲ್ಲಿ ಗರ್ಭಿಣಿ, ಬಾಣಂತಿಯರಲ್ಲಿ ಅಪೌಷ್ಠಿಕತೆ ಮತ್ತು ರಕ್ತಹೀನತೆ ತಡೆಯಲು ಅನುವಾಗುವಂತೆ ಬಿಸಿಯೂಟವನ್ನು ಸಿದ್ಧಪಡಿಸಿ ಅಂಗನವಾಡಿ ಕೇಂದ್ರದಲ್ಲಿಯೇ ವಿತರಣೆ ಮಾಡಲಾಗುತ್ತಿದೆ.

ಮುಂದುವರೆದು, ಪ್ರಸಕ್ತ ಸಾಲಿನಲ್ಲಿ ಫಲಾನುಭವಿಗಳ ಇಚ್ಛೆಗನುಸಾರವಾಗಿ ಅಗತ್ಯವಿರುವ ಕಚ್ಚಾ ಆಹಾರ ಸಾಮಗ್ರಿಗಳನ್ನು ಮನೆಗೆ (THR) ವಿತರಿಸಲಾಗುತ್ತಿದೆ ಹಾಗೂ ಅಂಗನವಾಡಿ ಕೇಂದ್ರದಲ್ಲಿಯೇ ಪೌಷ್ಠಿಕಯುಕ್ತ ಬಿಸಿಯೂಟವನ್ನು ಸ್ವೀಕರಿಸಬಹುದಾಗಿದೆ.

**(ಬಿ) ಮಕ್ಕಳಿಗೆ ಪೂರಕ ಪೌಷ್ಠಿಕ ಆಹಾರ :** ಅಂಗನವಾಡಿ ಕೇಂದ್ರಗಳಲ್ಲಿ ದಾಖಲಾದ 6 ತಿಂಗಳಿಂದ 6 ವರ್ಷದ ಮಕ್ಕಳಿಗೆ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ 300 ದಿನಗಳ ಪೂರಕ ಪೌಷ್ಠಿಕ ಆಹಾರವನ್ನು ನೀಡಲಾಗುತ್ತಿದೆ.

- ಎಲ್ಲಾ ಮಕ್ಕಳಿಗೆ ಅಂಗನವಾಡಿ ಕೇಂದ್ರದಲ್ಲಿ ಪ್ರತಿದಿನ ರೂ.**8.00** ಮೌಲ್ಯದ **ಪೂರಕ ಪೌಷ್ಠಿಕ ಆಹಾರ**ವನ್ನು ನೀಡಲಾಗುತ್ತಿದೆ.
- **ತೀವ್ರ ಅಪೌಷ್ಠಿಕ** ಮಕ್ಕಳಿಗೆ ಪ್ರತಿ ದಿನ ರೂ.12.00 ಮೌಲ್ಯದ ಪೂರಕ ಪೌಷ್ಠಿಕ ಆಹಾರವನ್ನು ನೀಡಲಾಗುತ್ತಿದೆ.
- ಅಂಗನವಾಡಿಗೆ ಹಾಜರಾಗುವ **3 ವರ್ಷದಿಂದ 6** ವರ್ಷದ ಎಲ್ಲಾ ಮಕ್ಕಳಿಗೆ ವಾರದಲ್ಲಿ **2 ದಿನ ಮೊಟ್ಟೆಯನ್ನು** ನೀಡಲಾಗುತ್ತಿದೆ.
- ರಾಜ್ಯ ಸರ್ಕಾರದ ಕ್ಷೀರಭಾಗ್ಯ ಯೋಜನೆಯಡಿ **6** ತಿಂಗಳಿಂದ 6 ವರ್ಷದ ಎಲ್ಲಾ ಅಂಗನವಾಡಿ ಮಕ್ಕಳಿಗೆ ವಾರದಲ್ಲಿ 5 ದಿನ 150 ಮಿ.ಲಿ ಹಾಲನ್ನು (15ಗ್ರಾಂ ಕೆನೆಭರಿತ ಹಾಲಿನಪುಡಿ, 5 ಗ್ರಾಂ ಸಕ್ಕರೆ) ನೀಡಲಾಗುತ್ತಿದೆ.
- 6 ತಿಂಗಳಿಂದ 3 ವರ್ಷದ ತೀವ್ರ / ಸಾಧಾರಣ ಅಪೌಷ್ಠಿಕ ಮಕ್ಕಳಿಗೆ ವಾರದಲ್ಲಿ 3 ದಿನ ಮೊಟ್ಟೆ ಹಾಗೂ 3 ದಿನ 20 ಗ್ರಾಂ. ಹಾಲಿನ ಪುಡಿಯನ್ನು ಮನೆಗೆ ವಿತರಿಸಲಾಗುತ್ತಿದೆ.
- 3 ವರ್ಷದಿಂದ 6 ವರ್ಷದ ತೀವ್ರ / ಸಾಧಾರಣ ಅಪೌಷ್ಠಿಕ ಮಕ್ಕಳಿಗೆ ವಾರದಲ್ಲಿ 5 ದಿನ ಮೊಟ್ಟೆ ಹಾಗೂ 3 ದಿನ 20 ಗ್ರಾಂ. ಹಾಲಿನ ಪುಡಿಯನ್ನು ಮನೆಗೆ ವಿತರಿಸಲಾಗುತ್ತಿದೆ.